# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ ಪಂಚಾಯತ್‌ಗಳಲ್ಲಿ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ಲೆಕ್ಕ ಶೀರ್ಷಿಕೆ 2515ರಡಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಕಡತ ಸಂಖ್ಯೆ: ಗ್ರಾಅಪ 10 ಎಸ್‌ಜೆವ್ವೈ (ಡಿಆರ್‌ಡಿಎ) 2014
2. ಮರು ಹೊಂದಾಣಿಕೆ ಆದೇಶ ಸಂಖ್ಯೆ: ಆಇ 155 ವೆಚ್ಚ6/2014 ದಿನಾಂಕ:3-2-2015

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಕಡತದಲ್ಲಿ ಬೆಂಗಳೂರು(ನಗರ), ಬೆಂಗಳೂರು(ಗ್ರಾ), ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಹಾಸನ, ಕೊಡಗು, ವಿಜಯಪುರ ಧಾರವಾಡ, ಉತ್ತರ ಕನ್ನಡ, ಕಲಬುರ್ಗಿ, ಬಳ್ಳಾರಿ, ಬೀದರ್, ಯಾದಗಿರಿ, ದಾವಣಗೆರೆ, ಚಿಕ್ಕಬಳ್ಳಾಪುರ ಮತ್ತು ಕೊಪ್ಪಳ ಜಿಲ್ಲಾ ಪಂಚಾಯತ್‌ಗಳಲ್ಲಿ ಡಿ.ಆರ್.ಡಿ.ಎ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಒಟ್ಟು ರೂ.456.50ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-101-0-01-101(ಯೋಜನೆ) ಅಡಿ ಬಿಡುಗಡೆಗೊಳಿಸುವಂತೆ ಹಾಗೂ ಕೊಪ್ಪಳ ಜಿಲ್ಲಾ ಪಂಚಾಯತ್ ಅಗತ್ಯವಿರುವ ರೂ.17.60ಲಕ್ಷ ಹೆಚ್ಚುವರಿ ಅನುದಾನವನ್ನು ಮರುಹೊಂದಾಣಿಕೆ ಮೂಲಕ ಒದಗಿಸಿ ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯಂತೆ ಬೆಂಗಳೂರು(ಗ್ರಾ) ಜಿಲ್ಲಾ ಪಂಚಾಯತ್‌ನ ಕಾರ್ಯಕ್ರಮದಡಿ ಉಳಿತಾಯವಾಗುವ ಅನುದಾನದಲ್ಲಿ ರೂ.17.60ಲಕ್ಷಗಳ ಅನುದಾನವನ್ನು ಮೇಲೆ(2)ರಲ್ಲಿನ ಆದೇಶದ ಮೂಲಕ ಕೊಪ್ಪಳ ಜಿಲ್ಲಾ ಪಂಚಯತ್‌ಗೆ ಮರುಹೊಂದಾಣಿಕೆಗೊಳಿಸಿದೆ. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಂಬಂಧ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 155 ವೆಚ್ಚ6/2014 ದಿನಾಂಕ:3ನೇ ಫೆಬ್ರವರಿ 2015

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಯೋಜನೆ ಲಿಂಕ್ ಡಾಕ್ಯುಮೆಂಟ್ ಲೆಕ್ಕ ಶಿರ್ಷಿಕೆ 2515-00-101-0-01-101-ಡಿ.ಆರ್.ಡಿ.ಎ. ಆಡಳಿತ ವೆಚ್ಚ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನಕ್ಕೆ ಕೊರತೆಯಾಗಿರುವ ರೂ.456.50ಲಕ್ಷ (ರೂಪಾಯಿ ನಾಲ್ಕು ನೂರ ಐವತ್ತಾರು ಲಕ್ಷದ ಐವತ್ತು ಸಾವಿರಗಳು ಮಾತ್ರ)ಗಳ ಅನುದಾನವನ್ನು ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ 2515-00-196-6-06(ಯೋಜನೆ) ಅಡಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಯಾದ ಅನುದಾನವನ್ನು ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ನಿಯಮಾನುಸಾರ ವೆಚ್ಚ ಭರಿಸಲು ಆದೇಶಿಸಿದೆ.

| ಕ್ರ.ಸಂ. | ಜಿಲ್ಲಾ ಪಂಚಾಯತ್ | ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೆಂಗಳೂರು(ನಗರ)-401 | 28.10 |
| 2 | ಬೆಂಗಳೂರು(ಗ್ರಾಮಾಂತರ)-402 | 26.20 |
| 3 | ಚಿತ್ರದುರ್ಗ-403 | 22.00 |
| 4 | ಶಿವಮೊಗ್ಗ-405 | 28.50 |
| 5 | ಮೈಸೂರು-407 | 35.00 |
| 6 | ಹಾಸನ-410 | 33.50 |
| 7 | ಕೊಡಗು-411 | 8.20 |

| | | |
|---|---|---|
| 8 | ವಿಜಯಪುರ–414 | 12.00 |
| 9 | ಧಾರವಾಡ–415 | 45.00 |
| 10 | ಉತ್ತರ ಕನ್ನಡ–416 | 18.00 |
| 11 | ಕಲಬುರ್ಗಿ–417 | 34.00 |
| 12 | ಬಳ್ಳಾರಿ–418 | 10.00 |
| 13 | ಬೀದರ್–419 | 44.00 |
| 14 | ಯಾದಗಿರಿ–421 | 15.00 |
| 15 | ದಾವಣಗೆರೆ–451 | 28.00 |
| 16 | ಚಿಕ್ಕಬಳ್ಳಾಪುರ–453 | 42.00 |
| 17 | ಕೊಪ್ಪಳ–466 | 27.00 |
| | ಒಟ್ಟು | 456.50 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಮುರಳೀಧರ
3-2-15

(ಕೆ. ಮುರಳೀಧರ)

ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ 5)

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ .
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು,
6. ರಕ್ಷಾ ಕಡತಕ್ಕೆ
7. ಹೆಚ್ಚುವರಿ ಪ್ರತಿಗಳು